ಕರ್ನಾಟಕ ಸರ್ಕಾರ
ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ ಕಾರ್ಯಾಲಯ ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:೦೦6 ಹುಬ್ಬಳ್ಳಿ ರಸ್ತೆ : 582101
ದೂರವಾಣಿ: 08372-220711 E-mail: deputydirwcdgadag@gmail.com

ಸಂ/ಉನಿಗ/ಮಮಅಇ/ಅಂಕಾಕ/ಅಂಸ/2017-18 ದಿನಾಂಕ:20.02.2018

:ಅಧಿಸೂಚನೆ:

ಸರ್ಕಾರದ ಆದೇಶ ಸಂಖ್ಯೆ:ಮಮಿ 303 ಐಸಿಡಿ 2017 ದಿನಾಂಕ:23.09.2017 ರ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ನೇಮಕಾತಿಯ ಪರಿಷ್ಕೃತ ಮಾರ್ಗಸೂಚಿಯಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಗದಗ ಅನುಮೋದನೆಯಂತೆ, ಗದಗ ಜಿಲ್ಲೆಯ 05 ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಲ್ಲಿ ಖಾಲಿ ಇರುವ 25-ಅಂಗನವಾಡಿ ಕಾರ್ಯಕರ್ತೆ (ಅನುಬಂಧ-1ರಲ್ಲಿ) ಮತ್ತು 80-ಅಂಗನವಾಡಿ ಸಹಾಯಕಿ (ಅನುಬಂಧ-2ರಲ್ಲಿ) ಗೌರವ ಸೇವೆಯ ಹುದೆಗಳನ್ನು ಭರ್ತಿ ಮಾಡಲು ಆನ್‌ಲೈನ್ **(ವೆಬ್ ಸೈಟ್ ವಿಳಾಸ: www.anganwadirecruit.kar.nic.in)** ಮೂಲಕ ಈ ಕೆಳಗಿನ ಮಾರ್ಗಸೂಚಿ/ನಿಬಂಧನೆಗಳು ತಿಳಿಸಿರುವಂತೆ **ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿ** ಆಹ್ವಾನಿಲಾಗಿತ್ತು. **ಆನ್‌ಲೈನ್ ಅರ್ಜಿ** ಸಲ್ಲಿಸುವ ಪ್ರಾರಂಭದ ದಿನಾಂಕ:21.02.2018 ಬೆಳಿಗ್ಗೆ 10.00 ಗಂಟೆಯಿಂದ ಪ್ರಾರಂಭವಾಗಿ **ಆನ್‌ಲೈನ್ ಅರ್ಜಿ** ಸಲ್ಲಿಸುವ ಕೊನೆಯ ದಿನಾಂಕ:22.03.2018 ಸಂಜೆ 5.30 ಗಂಟೆಯವರೆಗೆ ಇರುತ್ತದೆ.

ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭದ ದಿನಾಂಕ	21.02.2018 ಬೆಳಿಗ್ಗೆ 10.00 ಗಂಟೆಯಿಂದ
ಆನ್‌ಲೈನ್ ಅರ್ಜಿ ಸಲ್ಲಸಲು ಕೊನೆಯ ದಿನಾಂಕ	22.03.2018 ಸಂಜೆ 5.30 ಗಂಟೆಯವರೆಗೆ
ಆನ್‌ಲೈನ್ ವೆಬ್ ಸೈಟ್ ವಿಳಾಸ	www.anganwadirecruit.kar.nic.in

ಅನುಬಂಧ-1

ಗದಗ ಜಿಲ್ಲೆಯ 5 ತಾಲೂಕಿನ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ ಅಂಗನವಾಡಿ ಕಾರ್ಯಕರ್ತೆ ಹುದ್ದೆಯ ವಿವರ.

ಖಾಲಿ ಹುದ್ದೆಗಳ ಮಾಹಿತಿ :

ಹುದ್ದೆ :- ಅಂಗನವಾಡಿ ಕಾರ್ಯಕರ್ತೆ **ಜಿಲ್ಲೆ:- ಗದಗ**

ಕ್ರ.ಸಂ	ಕೇಂದ್ರದ ಹೆಸರು	ಗ್ರಾಮ / ವಾರ್ಡ	ಮೀಸಲಾತಿ	ಐ .ಸಿ .ಡಿ .ಎಸ್ ಯೋಜನೆ
1	ದೊಡ್ಡೂರ್ -82	ದೊಡ್ಡೂರ್	ಇತರೆ	ಶಿರಹಟ್ಟಿ
2	ಶ್ಯಾಬಳ-130	ದೊಡ್ಡೂರ್	ಇತರೆ	ಶಿರಹಟ್ಟಿ
3	ರಣತೂರ್ -30	ರಣತೂರ್	ಇತರೆ	ಶಿರಹಟ್ಟಿ
4	ಸೂರಣಗಿ -185	ಸೂರಣಗಿ	ಎಸ್ ಸಿ	ಶಿರಹಟ್ಟಿ
5	ಲಕ್ಷ್ಮೇಶ್ವರ್ -228	ಲಕ್ಷ್ಮೇಶ್ವರ ಪುರಸಭೆ - 4,5,11	ಇತರೆ	ಶಿರಹಟ್ಟಿ
6	ಕದಡಿ-129	ಕದಡಿ	ಇತರೆ	ಗದಗ
7	ಹರ್ಲಾಪೂರ -100	ಹರ್ಲಾಪೂರ	ಇತರೆ	ಗದಗ

8	ಬಿಂಕದಕಟ್ಟಿ -13	ಬಿಂಕದಕಟ್ಟಿ	ಇತರೆ	ಗದಗ
9	ಕೋಟುಮಚಗಿ -09	ಕೋಟುಮಚಗಿ	ಇತರೆ	ಗದಗ
10	ಮುಳಗುಂದ-140	ಮುಳಗುಂದ ಪಟ್ಟಣ ಪಂಚಾಯತ	ಇತರೆ	ಗದಗ
11	ಮುಳಗುಂದ -323	ಮುಳಗುಂದ ಪಟ್ಟಣ ಪಂಚಾಯತ	ಎಸ್ ಟಿ	ಗದಗ
12	ಗಾವರವಾಡ-126	ಹೊಂಬಳ	ಎಸ್ ಸಿ	ಗದಗ
13	ಕಣಗಿನಹಾಳ-107	ಕಣಗಿನಹಾಳ	ಇತರೆ	ಗದಗ
14	ಲಕ್ಕುಂಡಿ -87	ಲಕ್ಕುಂಡಿ	ಇತರೆ	ಗದಗ
15	ಮೆಣಸಗಿ - 61	ಮೆಣಸಗಿ	ಇತರೆ	ರೋಣ
16	ಗುಳಗುಂದಿ - 62	ಮೆಣಸಗಿ	ಇತರೆ	ರೋಣ
17	ಅಮರಗೋಳ- 79	ಅಮರಗೋಳ	ಇತರೆ	ರೋಣ
18	ರಾಜೂರ್ -273	ರಾಜೂರ್	ಇತರೆ	ರೋಣ
19	ರೋಣ - 216	ರೋಣ (ವಾರ್ಡ್ ಸಂಖ್ಯೆ -15)	ಇತರೆ	ರೋಣ
20	ಲಕ್ಕಲಕಟ್ಟಿ - 148	ಲಕ್ಕಲಕಟ್ಟಿ	ಇತರೆ	ರೋಣ
21	ನಾಗರಶಿಕೊಪ್ಪ - 193	ಗೊಗೇರಿ	ಎಸ್ ಸಿ	ರೋಣ
22	ಮೂಗನೂರ -126	ಬನಹಟ್ಟಿ	ಎಸ್ ಸಿ	ನರಗುಂದ
23	ಹುಣಸಿಕಟ್ಟಿ -116	ಹುಣಸಿಕಟ್ಟಿ	ಇತರೆ	ನರಗುಂದ
24	ಸುರಕೋಡ -38	ಸುರಕೋಡ	ಇತರೆ	ನರಗುಂದ
25	ಚಿಕ್ಕನರಗುಂದ -42	ಚಿಕ್ಕನರಗುಂದ	ಇತರೆ	ನರಗುಂದ

ಅನುಬಂಧ–2

ಗದಗ ಜಿಲ್ಲೆಯ 5 ತಾಲೂಕಿನ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ ಅಂಗನವಾಡಿ ಸಹಾಯಕಿ ಹುದ್ದೆಯ ವಿವರ.

ಖಾಲಿ ಹುದ್ದೆಗಳ ಮಾಹಿತಿ :

ಹುದ್ದೆ :- ಅಂಗನವಾಡಿ ಸಹಾಯಕಿ **ಜಿಲ್ಲೆ:- ಗದಗ**

ಕ್ರ.ಸಂ	ಕೇಂದ್ರದ ಹೆಸರು	ಗ್ರಾಮ / ವಾರ್ಡ	ಮೀಸಲಾತಿ	ಐ.ಸಿ.ಡಿ.ಎಸ್ ಯೋಜನೆ
1	ಶಿಗ್ಲಿ -74	ಶಿಗ್ಲಿ	ಎಸ್. ಸಿ	ಶಿರಹಟ್ಟಿ
2	ಹೆಬ್ಬಾಳ -151	ಹೆಬ್ಬಾಳ	ಎಸ್. ಸಿ	ಶಿರಹಟ್ಟಿ
3	ಕೊಗನೂರ -189	ಕೊಗನೂರ	ಇತರೆ	ಶಿರಹಟ್ಟಿ
4	ಲಕ್ಷ್ಮೇಶ್ವರ್ -48	ಲಕ್ಷ್ಮೇಶ್ವರ್ -1 & 6	ಇತರೆ	ಶಿರಹಟ್ಟಿ
5	ಯಳವತ್ತಿ -34	ಯಳವತ್ತಿ	ಎಸ್. ಸಿ	ಶಿರಹಟ್ಟಿ
6	ಕಡಕೋಳ -16	ಕಡಕೋಳ	ಇತರೆ	ಶಿರಹಟ್ಟಿ
7	ಶಿರಹಟ್ಟಿ -141	ಶಿರಹಟ್ಟಿ ಪಟ್ಟಣ ಪಂಚಾಯತ್ -3	ಇತರೆ	ಶಿರಹಟ್ಟಿ
8	ಸೂರಣಗಿ -50	ಸೂರಣಗಿ	ಇತರೆ	ಶಿರಹಟ್ಟಿ
9	ಮಾಡಳ್ಳಿ-36	ಮಾಡಳ್ಳಿ	ಇತರೆ	ಶಿರಹಟ್ಟಿ

10	ಆಡರಕಟ್ಟಿ -58	ಆಡರಕಟ್ಟಿ	ಇತರೆ	ಶಿರಹಟ್ಟಿ
11	ಬೆಳ್ಳಟ್ಟಿ -126	ಬೆಳ್ಳಟ್ಟಿ	ಇತರೆ	ಶಿರಹಟ್ಟಿ
12	ನಾದಿಗಟ್ಟಿ -8	ಆಡರಹಳ್ಳಿ	ಇತರೆ	ಶಿರಹಟ್ಟಿ
13	ಆಡರಕಟ್ಟಿ -59	ಆಡರಕಟ್ಟಿ -60	ಇತರೆ	ಶಿರಹಟ್ಟಿ
14	ಶಿಗ್ಲಿ -216	ಶಿಗ್ಲಿ	ಇತರೆ	ಶಿರಹಟ್ಟಿ
15	ಶಿರಹಟ್ಟಿ -1	ಶಿರಹಟ್ಟಿ ಪಟ್ಟಣ ಪಂಚಾಯತ್ -3,4 & 6	ಇತರೆ	ಶಿರಹಟ್ಟಿ
16	ಕೊಗನೂರ -117	ಕೊಗನೂರ	ಇತರೆ	ಶಿರಹಟ್ಟಿ
17	ಶಿರಹಟ್ಟಿ -192	ಶಿರಹಟ್ಟಿ ಪಟ್ಟಣ ಪಂಚಾಯತ್	ಇತರೆ	ಶಿರಹಟ್ಟಿ
18	ಚನ್ನಪಟ್ಟಣ -30	ಮಾಗಡಿ	ಎಸ್. ಸಿ	ಶಿರಹಟ್ಟಿ
19	ಪೆಠಾಲೂರ-60	ಪೆಠಾಲೂರ	ಇತರೆ	ಮುಂಡರಗಿ
20	ಹಾಳಕೇರಿ-68	ಹಾಳಕೇರಿ	ಇತರೆ	ಮುಂಡರಗಿ
21	ಅತ್ತಿಕಟ್ಟಿ-85	ಸಿಂಗಟರಾಯನಕೇರಿ	ಎಸ್. ಸಿ	ಮುಂಡರಗಿ
22	ಮುಷ್ಠಿಕೊಪ್ಪ-9	ಕಲಕೇರಿ	ಇತರೆ	ಮುಂಡರಗಿ
23	ಮುಂಡರಗಿ ವಿದ್ಯಾನಗರ್ -137	ಮುಂಡರಗಿ ಪುರಸಭೆ -15,16,18,19,20,21	ಇತರೆ	ಮುಂಡರಗಿ
24	ಗದಗ-1-211	ಗದಗ ನಗರಸಭೆ -15-16	ಇತರೆ	ಗದಗ
25	ಗದಗ-2-198	ಗದಗ ನಗರಸಭೆ -17	ಇತರೆ	ಗದಗ
26	ಹೊಸೂರು -67	ಯಲಿಶಿರೂರ	ಇತರೆ	ಗದಗ
27	ಮುಳುಗುಂದ -323	ಮುಳುಗುಂದ ಪಟ್ಟನ್ ಪಂಚಾಯತ್ -1	ಎಸ್. ಟಿ	ಗದಗ
28	ಕದಡಿ-128	ಕದಡಿ	ಇತರೆ	ಗದಗ
29	ಅಡವಿಸೋಮಾಪೂರ ತಾಂಡಾ -49	ಅಡವಿಸೋಮಾಪೂರ	ಎಸ್. ಸಿ	ಗದಗ
30	ಬೆಟಗೇರಿ -1-218	ಗದಗ ನಗರಸಭೆ -5	ಇತರೆ	ಗದಗ
31	ಗದಗ-1-190	ಗದಗ ನಗರಸಭೆ -35	ಇತರೆ	ಗದಗ
32	ಬೆಟಗೇರಿ -2-232	ಗದಗ ನಗರಸಭೆ -3 & 8	ಇತರೆ	ಗದಗ
33	ಕುರ್ತಕೋಟಿ -33	ಕುರ್ತಕೋಟಿ	ಎಸ್. ಸಿ	ಗದಗ
34	ಕಳಸಾಪುರ -39	ನಾಗಾವಿ	ಎಸ್. ಟಿ	ಗದಗ
35	ನಾಗಾವಿ ತಾಂಡಾ -72	ನಾಗಾವಿ	ಎಸ್. ಸಿ	ಗದಗ
36	ಸಂಭಾಪುರ -28	ಹಾತಲಗೇರಿ	ಇತರೆ	ಗದಗ
37	ಗದಗ-1-184	ಗದಗ ನಗರಸಭೆ -35	ಎಸ್. ಸಿ	ಗದಗ
38	ಬೆಟಗೇರಿ 1-224	ಗದಗ ನಗರಸಭೆ -4	ಇತರೆ	ಗದಗ
39	ಮುಳುಗುಂದ -139	ಮುಳುಗುಂದ ಪಟ್ಟನ್ ಪಂಚಾಯತ್ -16	ಇತರೆ	ಗದಗ

40	ಕಣಗಿನಹಾಳ -105	ಕಣಗಿನಹಾಳ	ಇತರೆ	ಗದಗ
41	ಗದಗ-1-167	ಗದಗ ನಗರಸಭೆ -35	ಎಸ್. ಸಿ	ಗದಗ
42	ಗದಗ-2-174	ಗದಗ ನಗರಸಭೆ -22	ಇತರೆ	ಗದಗ
43	ಗದಗ-2-179	ಗದಗ ನಗರಸಭೆ -22	ಇತರೆ	ಗದಗ
44	ಗದಗ-2-180	ಗದಗ ನಗರಸಭೆ -20	ಇತರೆ	ಗದಗ
45	ಗದಗ -2-201	ಗದಗ ನಗರಸಭೆ -21	ಎಸ್. ಸಿ	ಗದಗ
46	ಗದಗ-2-319	ಗದಗ ನಗರಸಭೆ -21	ಇತರೆ	ಗದಗ
47	ಬೆಟಗೇರಿ- 1-221	ಗದಗ ನಗರಸಭೆ -4	ಇತರೆ	ಗದಗ
48	ಬೆಟಗೇರಿ - 2-204	ಗದಗ ನಗರಸಭೆ -2	ಇತರೆ	ಗದಗ
49	ಕೋಟುಮಚಗಿ-111	ಕೋಟುಮಚಗಿ	ಇತರೆ	ಗದಗ
50	ಹುಯಿಲಗೋಳ-283	ಹುಯಿಲಗೋಳ	ಇತರೆ	ಗದಗ
51	ಹೊನ್ನಿಗನೂರ - 91	ಹಿರಿಯಾಳ	ಇತರೆ	ರೋಣ
52	ನೈನಾಪುರ - 77	ಮಾಡಲಗಿರಿ	ಇತರೆ	ರೋಣ
53	ಮೆಣಸಗಿ - 61	ಮೆಣಸಗಿ	ಇತರೆ	ರೋಣ
54	ಸೂಡಿ - 153	ಸೂಡಿ	ಇತರೆ	ರೋಣ
55	ಗಜೇಂದ್ರಗಡ - 185	ಗಜೆಂದ್ರಗಡ್ (ವಾರ್ಡ್ ನಂ .7)	ಇತರೆ	ರೋಣ
56	ಹೊಳೆಆಲೂರು - 195	ಹೊಳೆಆಲೂರು	ಇತರೆ	ರೋಣ
57	ಹೊಳೆಆಲೂರು - 195	ಹೊಳೆಆಲೂರು	ಇತರೆ	ರೋಣ
58	ನರೇಗಲ್ - 130	ನರೇಗಲ್ (ವಾರ್ಡ್ ನಂ - 6)	ಎಸ್. ಸಿ	ರೋಣ
59	ಚಿಕ್ಕಮಣ್ಣೂರು - 25	ಚಿಕ್ಕಮಣ್ಣೂರು	ಇತರೆ	ರೋಣ
60	ಸವಡಿ- 24	ಸವಡಿ	ಇತರೆ	ರೋಣ
61	ಡಿ.ಎಸ್. ಹಡಗಲಿ -272	ಡಿ.ಎಸ್. ಹಡಗಲಿ	ಇತರೆ	ರೋಣ
62	ಸರ್ಜಾಪುರ - 264	ಶಾಂತಗೇರಿ	ಎಸ್. ಸಿ	ರೋಣ
63	ಮ್ಯಾಕಲ್ ಝರಿ - 199	ಕುಂಟೋಜಿ	ಇತರೆ	ರೋಣ
64	ಬೆಳವಣಕಿ - 37	ಬೆಳವಣಕಿ	ಇತರೆ	ರೋಣ
65	ಕೌಜಗೇರಿ - 44	ಕೌಜಗೇರಿ	ಇತರೆ	ರೋಣ
66	ಅಬ್ಬಿಗೇರಿ - 137	ಅಬ್ಬಿಗೇರಿ	ಇತರೆ	ರೋಣ
67	ಅಬ್ಬಿಗೇರಿ - 138	ಅಬ್ಬಿಗೇರಿ	ಇತರೆ	ರೋಣ
68	ಮುದೇನಗುಡಿ - 72.	ಕುರಹಟ್ಟಿ	ಇತರೆ	ರೋಣ
69	ಮಾಟರಂಗಿ - 190	ಗೋಗೇರಿ	ಇತರೆ	ರೋಣ

70	ಜಗಾಪುರ -111	ಹುನಸಿಕಟ್ಟಿ	ಇತರೆ	ನರಗುಂದ
71	ಮೂಗನೂರ -126	ಬನಹಟ್ಟಿ	ಎಸ್. ಸಿ	ನರಗುಂದ
72	ನರಗುಂದ -12	ನರಗುಂದ ಪುರಸಭೆ -19	ಇತರೆ	ನರಗುಂದ
73	ನರಗುಂದ -15	ನರಗುಂದ ಪುರಸಭೆ -6	ಇತರೆ	ನರಗುಂದ
74	ನರಗುಂದ -86	ನರಗುಂದ ಪುರಸಭೆ -21	ಇತರೆ	ನರಗುಂದ
75	ನರಗುಂದ -87	ನರಗುಂದ ಪುರಸಭೆ -22	ಇತರೆ	ನರಗುಂದ
76	ನರಗುಂದ -13	ನರಗುಂದ ಪುರಸಭೆ -12	ಇತರೆ	ನರಗುಂದ
77	ಕೊಣ್ಣೂರು -74	ಕೊಣ್ಣೂರು	ಇತರೆ	ನರಗುಂದ
78	ಕೊಣ್ಣೂರು -76	ಕೊಣ್ಣೂರು	ಇತರೆ	ನರಗುಂದ
79	ಶಿರೋಳ -55	ಶಿರೋಳ	ಇತರೆ	ನರಗುಂದ
80	ಹಿರೇಕೊಪ್ಪ -80	ಹಿರೇಕೊಪ್ಪ	ಇತರೆ	ನರಗುಂದ

ಈ ಕೆಳಗಿನಂತೆ ಮಾರ್ಗಸೂಚಿ/ನಿಬಂಧನೆಗಳು ತಿಳಿಸಿದಂತೆ ಅರ್ಹ ಮಹಿಳಾ ಅಭ್ಯರ್ಥಿಗಳವರ ಅರ್ಜಿ ಆಹ್ವಾನಿಸಲಾಗಿದೆ.

ಸೂಚನೆಗಳು:

1. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಳಿಗೆ ಅರ್ಜಿಗಳನ್ನು ಆನ್‌ಲೈನ್ (Online) ಮೂಲಕವೇ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಇತರೆ ಯಾವುದೇ ಮೂಲದಿಂದ ಸಲ್ಲಿಸಲು ಅವಕಾಶವಿರುವುದಿಲ್ಲ. ಅವುಗಳನ್ನು ಪರಿಗಣಿಸಲಾಗುವುದಿಲ್ಲಾ.
2. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಮೊದಲು ಈ ಕೆಳಗಿನ ನೇಮಕಾತಿಯ ಮಾರ್ಗಸೂಚಿ/ನಿಬಂಧನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ನೀಡಲಾಗಿರುವ ಸೂಚನೆಯಂತೆ ಅವುಗಳನ್ನು ಭರ್ತಿ ಮಾಡಿ ಅವಶ್ಯಕ ಮೂಲ ದಾಖಲೆಗಳನ್ನು ಸ್ಕಾನ ಮಾಡಿ ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸುವುದು.
3. ಆನ್‌ಲೈನ್ (Online) ಮೂಲಕವೇ ಎಲ್ಲಾ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವುದು. ತದನಂತರ ಸಲ್ಲಿಸುವ ದಾಖಲಾತಿಗಳನ್ನು ಪರಿಗಣಿಸುವುದಿಲ್ಲ.
4. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮುಂಡರಗಿ ಪಟ್ಟಣದ ವಿದ್ಯಾನಗರ ಅಂಗನವಾಡಿ ಕೇಂದ್ರ ಸಂ:137 ವಾರ್ಡ ನಂ:18ಸದರಿ ಅಂಗನವಾಡಿ ಕೇಂದ್ರ ಸಹಾಯಕಿ ಹುದ್ದೆಗೆ 3 ಬಾರಿ ಅರ್ಜಿ ಕರೆದರು ಯಾವುದೇ ಅರ್ಜಿ ಬರದ ಕಾರಣ ಪಕ್ಕದ ವಾರ್ಡ ನಂ:15,16,19,20,21 ರ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಮಾರ್ಗಸೂಚಿ/ನಿಬಂಧನೆಗಳು:

1. ವಯೋಮಿತಿ:
   1) ಕನಿಷ್ಠ 18 ವರ್ಷದಿಂದ 35 ವರ್ಷಗಳ ವಯೋಮಿತಿಯೊಳಗಿರತಕ್ಕದ್ದು.
   2) ಸರ್ಕಾರದ ಸೇರ್ಪಡೆ ಆದೇಶ ಸಂ:ಮಮಇ:27:ಐಸಿಡಿ:2017 ದಿನಾಂಕ:01.12.2017ರ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಗಳಲ್ಲಿ ವಿಕಲಚೇತನರಿಗೆ 10 ವರ್ಷ ವಯೋಮಿತಿ ಸಡಿಲಿಕೆಯನ್ನು ನೀಡಿದೆ.
2. ಸ್ಥಳೀಯತೆ : ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಸಂಬಂಧಿಸಿದಂತೆ ಗ್ರಾಮಾಂತರ ಪ್ರದೇಶದಲ್ಲಿ ಕೇಂದ್ರದ ವ್ಯಾಪ್ತಿಯ ಕಂದಾಯ ಗ್ರಾಮವನ್ನು ಹಾಗೂ ನಗರ ಪ್ರದೇಶದಲ್ಲಿ ಕೇಂದ್ರದ ವ್ಯಾಪ್ತಿಯ ಕಂದಾಯ ವಾರ್ಡಗಳನ್ನು ಮಾತ್ರ ಪರಿಗಣಿಸಲಾಗುವುದು. ಚುನಾವಣೆ ವಾರ್ಡಗಳನ್ನು ಪರಿಗಣಿಸಲಾಗುವುದಿಲ್ಲ. ಸ್ಥಳೀಯತೆಯ ಬಗ್ಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕದಿಂದ 1 ವರ್ಷ ಅವಧಿಯೋಳಗಿನ ತಹಶೀಲ್ದಾರರು/ಉಪತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸುವುದು.

3. **ಹುದ್ದೆಯ ಮೀಸಲಾತಿ :** ಹುದ್ದೆ ಖಾಲಿ ಇರುವ ಸ್ಥಳ, ಆ ಹುದ್ದೆ ಜನಸಂಖ್ಯೆ ಆಧಾರದಲ್ಲಿ ಯಾವ ವರ್ಗಕ್ಕೆ ಮೀಸಲಾಗಿದೆಯೊ ಆ ವರ್ಗಕ್ಕೆ ಒಳಪಡುವ ಅಭ್ಯರ್ಥಿಗಳ ಅರ್ಜಿಗಳ ಅರ್ಜಿಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.

4. **ಮೀಸಲಾತಿ ನಿಗದಿ:** ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳು ಗೌರವಸೇವೆಗೆ ಸೇರಿದ್ದು, ಸರ್ಕಾರಿ ಹುದ್ದೆಗಳ ಮೀಸಲಾತಿ ತತ್ವಗಳು, ಅನ್ವಯಿಸುವುದಿಲ್ಲ. ಅಂಗನವಾಡಿ ಕೇಂದ್ರ ಪ್ರಾರಂಭಿಸುವ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ/ನಗರ ಪ್ರದೇಶದ ಕಂದಾಯ ವಾರ್ಡನ ಒಟ್ಟು ಜನಸಂಖ್ಯೆ ಮತ್ತು ಒಂದೇ ಗ್ರಾಮ/ವಾರ್ಡನಲ್ಲಿ ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಜನಸಂಖ್ಯೆಗೆ ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ವರ್ಗದವರನ್ನು ಒಳಗೊಂಡಿದ್ದ ಸಂದರ್ಭದಲ್ಲಿ ಈ ವರ್ಗಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆಯಿರುವ ವರ್ಗದವರಿಗೆ ಕಾರ್ಯಕರ್ತೆ ಹುದ್ದೆಯನ್ನು ಮೀಸಲಿರಿಸಲಾಗುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕಾರ್ಯಕರ್ತೆ ಹುದ್ದೆ ಮೀಸಲಿಟ್ಟ ಕೇಂದ್ರಗಳಲ್ಲಿ ಆ ವರ್ಗಕ್ಕೆ ಸೇರಿದವರನ್ನು ಮಾತ್ರ ಆಯ್ಕೆ ಮಾಡಲಾಗುವುದು. 25% ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ ಜನಸಂಖ್ಯೆಯಿರುವ ಪ್ರದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಉರ್ದು ಭಾಷೆ ಬಲ್ಲವರನ್ನು ಕಾರ್ಯಕರ್ತೆ ಹುದ್ದೆಗೆ ಆಯ್ಕೆ ಮಾಡಲಾಗುವುದು.

5. **ವಿದ್ಯಾರ್ಹತೆ :**

ಅಂಗನವಾಡಿ ಕಾರ್ಯಕರ್ತೆ : ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕು. ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆ ಪರಿಗಣಿಸುವುದಿಲ್ಲ.

- ಕರ್ನಾಟಕ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ಮುಕ್ತ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ/ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜಶಾಸ್ತ್ರ /ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ/ಅಂಕಪಟ್ಟಿಯ ಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.
- ಬೇರೆ ರಾಜ್ಯಗಳ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನಿಗದಿಪಡಿಸಿದ ಗರಿಷ್ಠ ಅಂಕಗಳ ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸದಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.
- ಕರ್ನಾಟಕ ಪರೀಕ್ಷಾ ಮಂಡಳಿ ಹೊರತುಪಡಿಸಿ ಇತರೆ ಮುಕ್ತ ಶಾಲೆ/ಮುಕ್ತ ವಿದ್ಯಾಲಯಗಳಿಂದ ಎಸ್.ಎಸ್.ಎಲ್.ಸಿ. ಉತ್ತೀರ್ಣತೆಯ ಬಗ್ಗೆ ಪಡೆದ ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
- ಅಂಗನವಾಡಿ ಕಾರ್ಯಕರ್ತೆಯರು ಶಾಲಾ ಪೂರ್ವ ಶಿಕ್ಷಣವನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕಾಗಿರುವದರಿಂದ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದರೂ ಸಹ ಅವರು ಕನ್ನಡ ಭಾಷೆಯನ್ನು ಓದುವ, ಬರೆಯುವ ಮತ್ತು ಮಾತನಾಡುವ ಜ್ಞಾನವನ್ನು ಹೊಂದಿರಬೇಕು. ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ವ್ಯಾಸಂಗ ಮಾಡಿರಬೇಕು. ಕನ್ನಡವನ್ನು 3ನೇ ಭಾಷೆಯಾಗಿ ವ್ಯಾಸಂಗ ಮಾಡಿದ್ದು, ಹಾಗೂ ಮಾತೃಭಾಷೆ ಕನ್ನಡವಲ್ಲದೆ ಇರುವ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಅಂತಹ ಅಭ್ಯರ್ಥಿಗಳಿಗೆ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಕನಿಷ್ಠ ಜ್ಞಾನದ ಕುರಿತಂತೆ ಓದಿಸಿ, ಬರೆಯಿಸಿ ಅವರ ಕನ್ನಡ ಭಾಷೆ ಜ್ಞಾನವನ್ನು ಪರೀಕ್ಷಿಸಿ ಅವರ ಆಯ್ಕೆಯನ್ನು ಮಾಡುವ ಬಗ್ಗೆ ಸಮಿತಿಯವರೇ ನಿರ್ಧರಿಸಬಹುದಾಗಿರುತ್ತದೆ.
- ಅಭ್ಯರ್ಥಿಯು ಮೇರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋ ಹಿರಿತನ ಪರಿಗಣಿಸಲಾಗುವುದು. ವಯಸ್ಸು ಸಮಾನವಾಗಿದ್ದಲ್ಲಿ ವಿವಾಹಿತರನ್ನು ಪರಿಗಣಿಸಲಾಗುವುದು.

- **ಅಂಗನವಾಡಿ ಸಹಾಯಕಿ :** ಕನಿಷ್ಠ 04ನೇ ತರಗತಿ ಗರಿಷ್ಠ 09ನೇ ತರಗತಿ ತೇರ್ಗಡೆ, ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.
- 4ನೇ ತರಗತಿ ವಿದ್ಯಾರ್ಹತೆಯುಳ್ಳವರು ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಲಾಗುವುದು.

- 4ನೇ ತರಗತಿಗಿಂತ ಹೆಚ್ಚು ವಿದ್ಯಾರ್ಹತೆಯುಳ್ಳವರು ಅರ್ಜಿ ಸಲ್ಲಿಸಿದಲ್ಲಿ 9ನೇ ತರಗತಿ ವಿದ್ಯಾರ್ಹತೆಗೆ ಮಿತಿಗೊಳಿಸಿ ಇದರಲ್ಲಿ ಹೆಚ್ಚು ವಿದ್ಯಾರ್ಹತೆಯುಳ್ಳ ಸ್ಥಳೀಯರನ್ನು ಆಯ್ಕೆ ಮಾಡಲಾಗುವುದು.
- ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಲಾಗುವುದು.
- 9ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸುವದಿಲ್ಲ. (ಅಭ್ಯರ್ಥಿಗಳು 9ನೇ ತರಗತಿ ಪಾಸಾದ ಅಂಕ ಪಟ್ಟಿ ಲಗತ್ತಿಸುವುದು. ಕಡ್ಡಾಯ ಒಂದುವೇಳೆ ಎಸ್.ಎಸ್.ಎಲ್.ಸಿ. ಪಾಸಾದ ಅಂಕ ಪಟ್ಟಿ ಲಗತ್ತಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.)
- ಅಂಗನವಾಡಿ ಸಹಾಯಕಿ ಹುದ್ದೆಗೆ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದರೂ ಸಹ ಕನ್ನಡ ಭಾಷೆಯನ್ನು ಓದುವ, ಬರೆಯುವ ಮತ್ತು ಮಾತನಾಡುವ ಜ್ಞಾನವಿರಬೇಕು.
- ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ವಿದ್ಯಾರ್ಹತೆ ನಿಗದಿಪಡಿಸಿದ ಗರಿಷ್ಠ ಅಂಕಗಳು ಹಾಗೂ ಕರ್ನಾಟಕದಲ್ಲಿ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು.

6. <u>ಆಯ್ಕೆಯ ಆದ್ಯತೆ:</u> ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಈ ಕೆಳಕಂಡ ಆದ್ಯತೆ ಪಡೆಯಲು ಇಚ್ಚಿಸುವ ಅರ್ಜಿದಾರರು ನಿಗದಿತ ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿಯೊಳಗೆ ನಿಗದಿತ ಮೀಸಲಾತಿ ಮತ್ತು ಸ್ಥಳೀಯರಾಗಿರಬೇಕು

- **ಆಸಿಡ್ ದಾಳಿಗೊಳಗಾದವರ ಆಯ್ಕೆ :** ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ, ಇತರೆ ಎಲ್ಲಾ ಅರ್ಜಿಗಳನ್ನು ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೊದಲ ಆದ್ಯತೆ ಮೇರೆಗೆ ನೇರವಾಗಿ ಅವರನ್ನ ಆಯ್ಕೆ ಮಾಡಲಾಗುವುದು.
- **ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ:** ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳು ಅರ್ಜಿ ಸಲ್ಲಿಸಿದಲ್ಲಿ ಆಯ್ಕೆಯ ಆದ್ಯತೆಯ (ಕ್ರಮ ಸಂ.1) ನೆಯವರನ್ನು ಹೊರತುಪಡಿಸಿ ಇತರೆ ಎಲ್ಲಾ ಅರ್ಜಿಗಳನ್ನು ಸ್ವಿಕೃತ ಅರ್ಜಿಗಳನ್ನು ಪರಿಗಣಿಸದೇ ಎರಡನೇ ಆದ್ಯತೆ ಮೇರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡಲಾಗುವುದು.
- **ವಿಧವೆಯರ ಆಯ್ಕೆ :** ಅ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ , ಆಯ್ಕೆಯ ಆದ್ಯತೆಯ (ಕ್ರಮ ಸಂ.1 & 2)ನೇ ಯವರನ್ನು ಹೊರತುಪಡಿಸಿ ಇತರೆ ಎಲ್ಲಾ ಅರ್ಜಿಗಳನ್ನು ಸವೀಕೃತ ಅರ್ಜಿಗಳನ್ನು ಪರಿಗಣಿಸದೇ ಮೂರನೇ ಆದ್ಯತೆ ಮೇರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡಲಾಗುವುದು. ಆ)ವಿಧವೆಯರಲ್ಲಿ , ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನಿಡಲಾಗುವುದು ಈ ಬಗ್ಗೆ ಉಪ ವಿಭಾಗಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು ಇ)ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನು ಅವರ ಸ್ಥಳವೆಂದು ಪರಿಗಣಿಸಲಾಗುವುದು. ಈ)ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಲಾಗುವುದು. ಉ) ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.
- **ಅಂಗವಿಕಲರ ಆಯ್ಕೆ:** ಅ) ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಮಾರ್ಗಸೂಚಿಯ ಆಯ್ಕೆಯ ಆದ್ಯತೆಯ (1), (2) ಮತ್ತು (3)ನೇಯವರನ್ನು ಹೊರತುಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದ ನಾಲ್ಕನೇ ಆದ್ಯತೆ ಮೇರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡತಕ್ಕದ್ದು. ಆ)ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದು. ಇ)ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ 3 ರಿಂದ 6 ವರ್ಷದ ಮಕ್ಕಳಿಗೆ ಆಟ ಮತ್ತು ಅಭಿನಯ ಗೀತೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದ್ದು ಚಟುವಟಿಕೆ ವೇಳೆಯಲ್ಲಿ ಮಕ್ಕಳನ್ನು ಹಿಡಿದೆತ್ತಿ ಸಲ್ಲಿಸಲು ಹಾಗೂ ಅಭಿನಯ ಮಾಡಿ ತೋರಿಸಬೇಕಾಗಿರುತ್ತದೆ. ವೃತ್ತಸಭೆ, ತಾಯಂದಿರ ಸಭೆ, ಮತ್ತು ಮನೆ ಭೇಟಿ ನಿರ್ವಹಿಸಬೇಕಾಗಿರುತ್ತದೆ. ಆದ ಕಾರಣ ಕಿವುಡರ ಮತ್ತು ಮೂಕರು, ಕುರುಡರು, ಬುದ್ಧಿ ಮಾಂದ್ಯರು, ಮಾನಸಿಕ ಅಸ್ವಸ್ಥರು ಕಾರ್ಯಕರ್ತೆ ಹುದ್ದೆಗೆ ಅರ್ಹರಲ್ಲ. ಈ)

ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಬೇಯಿಸಿ/ಸಿದ್ಧಪಡಿಸಿ ಉಣಬಡಿಸುವುದು, ಕೇಂದ್ರವನ್ನು ಸ್ವಚ್ಚಗೊಳಿಸುವುದು, ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವುದು ಹಾಗೂ ಕಾರ್ಯಕರ್ತೆಯು ವೃತ್ತಸಭೆ, ತಾಯಂದಿರ ಸಭೆ ಮತ್ತು ಭೇಟಿಗೆ ಹೋದಾಗ ಅಂಗನವಾಡಿ ಕೇಂದ್ರ ಜವಾಬ್ದಾರಿಯನ್ನು ನಿರ್ವಹಿಸಬೇಕು ಆದ್ದರಿಂದ ಸಹಾಯಕಿ ಹುದ್ದೆಗೆ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಊ) ಇತರೆ ದೈಹಿಕ ಅಂಗವೈಕಲ್ಯತೆ ಶೇ.60 ಮೀರದಂತೆ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ. ಅಂಗೀಕೃತ ಪ್ರಾಧಿಕಾರ (ಜಿಲ್ಲಾ ವೈದ್ಯಕೀಯ ಮಂಡಳಿ) ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು. ಋ) ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು. ಋ) ಅಂಗವಿಕಲತೆ ಬಗ್ಗೆ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಮಾತ್ರ ಪರಿಗಣಿಸಲಾಗುವುದು ಇತರೆ ಯಾವುದೇ ಮೂಲದಿಂದ ಪಡೆದ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ. ಎ) ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

7. <u>ಬೋನಸ್ ಅಂಕಗಳು (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)</u>

1) ಮಾಜಿ ದೇವದಾಸಿಯ ಮಗಳು.
2) ಯೋಜನಾ ನಿರಾಶ್ರಿತರು.
3) ವಿಚ್ಚೇದಿತ ಮಹಿಳೆಯರು.
4) ಪರಿತ್ಯಕ್ತೆಯರು.

ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯತಿಗೂ 5 ಬೋನಸ್ ಅಂಕ ನೀಡುವುದು, ಆದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕ್ಕೆ ಶೇಕಡಾ (5%) ಅಂಕ ನೀಡುವಂತಿಲ್ಲ. ಉದಾ: ಒಬ್ಬ ಅಭ್ಯರ್ಥಿಯು ನಿರಾಶ್ರಿತರು, ಪರಿತ್ಯಕ್ತೆ, ಮಾಜಿ ದೇವದಾಸಿ, ವಿಚ್ಚೇದಿತರು ಆಗಿದಲ್ಲಿ ಪ್ರತಿ ವಿನಾಯಿತಿಗೂ 5 ಬೋನಸ ಅಂಕಗಳನ್ನು ನೀಡುವುದು. ಅಂದರೆ ಸದರಿಯವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ ಮಾಜಿ ದೇವದಾಸಿಯರ ಅವಿವಾಹಿತ ಹೆಣ್ಣು ಮಕ್ಕಳು+5, ಯೋಜನಾ ನಿರಾಶ್ರಿತರು+5, ವಿಚ್ಚೇದಿತ ಮಹಿಳೆಯರು+5, ಪರಿತ್ಯಕ್ತೆಯರು+5, ಒಟ್ಟು 20 ಬೋನಸ್ ಅಂಕಗಳನ್ನು ನೀಡುವುದು. ಬೋನಸ್ ಅಂಕ ಪಡೆಯಲು ಸಂಬಂಧಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವುದು. ಕಡ್ಡಾಯ.

<u>ಆನ – ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:</u>

1) ಅರ್ಜಿ ನಿಗದಿತ ನಮೂನೆಯಲ್ಲಿ (ಆನ್–ಲೈನ್)
2) ಜನನ ಪ್ರಮಾಣ ಪತ್ರ /ಜನ್ಮ ದಿನಾಂಕ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
3) ನಿಗದಿತ ವಿದ್ಯಾರ್ಹತೆ ಅಂಕಪಟ್ಟಿ.
4) ತಹಶೀಲ್ದಾರರು/ಉಪತಹಶೀಲ್ದಾರರಿಂದ ಪಡೆದ ಒಂದು (1) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5) ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6) ಪತಿಯ ಮರಣ ಪ್ರಮಾಣ ಪತ್ರ. (ವಿಧವಾ ವೇತನ ಧೃಢೀಕರಣವನ್ನು ಪರಿಗಣಿಸುವಂತಿಲ್ಲ.)
7) ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
8) ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನ ಧೃಢೀಕರಣವನ್ನು ಪರಿಗಣಿಸುವಂತಿಲ್ಲ)
9) ವಿಚ್ಚೇಧನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು)
10) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
11) ಪರಿತ್ಯಕ್ತೆ ಬಗ್ಗೆ ಗ್ರಾಮ ಪಂಚಾಯತಿಯಿಂದ ಪಡೆದ ಪ್ರಮಾಣ ಪತ್ರ.
12) ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
13) ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ:

ಕ್ರ ಸಂ.	ಶಿಶು ಅಭಿವೃದ್ಧಿ ಯೋಜನೆ	ವಿಳಾಸ	ದೂರವಾಣಿ ಸಂ.
01	ಗದಗ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕಾಟನ ಸೇಲ್ಸ್ ಸೊಸೈಟಿ ಗದಗ	08372238823
02	ರೋಣ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ರೋಣ	08381267270
03	ಮುಂಡರಗಿ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮುಂಡರಗಿ	9448837228
04	ಶಿರಹಟ್ಟಿ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ತಾಲ್ಲೂಕು ಪಂಚಾಯತ ಕಟ್ಟಡ ಶಿರಹಟ್ಟಿ.	08487242203
05	ನರಗುಂದ	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ನರಗುಂದ	9886077551

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಗದಗ

ಪ್ರತಿಯನ್ನು:

1) ಮಾನ್ಯ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
2) ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
3) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಗದಗ ಇವರ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ ಗದಗ, ರೋಣ, ಮುಂಡರಗಿ, ನರಗುಂದ, ಶಿರಹಟ್ಟಿ ರವರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
5) ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಗದಗ ಇವರ ಮಾಹಿತಿಗಾಗಿ. ಹಾಗೂ ಸದರಿ ಪ್ರಕಟಣೆಯನ್ನು ಉಚಿತವಾಗಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.
6) ತಾಲ್ಲೂಕಾ ಆರೋಗ್ಯ ಅಧಿಕಾರಿಗಳು ಗದಗ, ರೋಣ, ಮುಂಡರಗಿ, ನರಗುಂದ, ಶಿರಹಟ್ಟಿ ರವರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
7) ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗದಗ, ರೋಣ, ಮುಂಡರಗಿ, ನರಗುಂದ, ಶಿರಹಟ್ಟಿ ರವರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
8) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಗದಗ, ರೋಣ, ಮುಂಡರಗಿ, ನರಗುಂದ, ಶಿರಹಟ್ಟಿ ರವರ ಮಾಹಿತಿಗಾಗಿ (ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮುಖಾಂತರ)
9) ಪ್ರಕಟಣೆ ಪ್ರತಿ.
10) ಕಛೇರಿ ಕಡತಕ್ಕೆ.